# ದೇಶಪ್ರೇಮದ ಮತ್ತೊಂದು ಮಗ್ಗಲು!

**ದೇಶಕ್ಕಾಗಿ ಪ್ರಾಣತೆತ್ತ ಸೈನಿಕನೊಟ್ಟಿಗೆ ಅನುದಿನವೂ ತನ್ನ ಪ್ರೇಮವನ್ನು ಬದುಕಿಸಿಕೊಳ್ಳಲು, ಬದುಕಿದೆ ಎಂದು ಭ್ರಮಿಸಿಕೊಳ್ಳಲು ಒದ್ದಾಡುತ್ತಿರುವ ಹುಡುಗಿಯ ಕಥೆಯೊಂದನ್ನು ಈ ಕಿರುಚಿತ್ರ ಆರ್ದ್ರವಾಗಿ ಹೇಳುತ್ತದೆ.**

■ ಗೌರಿ

ಇದು ತಾಂತ್ರಿಕವಾಗಿ ತುಂಬ ಗಟ್ಟಿಯಾದ ಕೃತಿಯಲ್ಲ. ಹಾಗೆ ನೋಡಿದರೆ ಇಲ್ಲಿ ಹೇಳುತ್ತಿರುವ ಕಥೆಯೂ ಹೊಸದೇನೂ ಅಲ್ಲ. ಆದರೂ ಹದಿನೈದು ನಿಮಿಷದ ಈ ಕಿರುಚಿತ್ರ ಮನಸ್ಸನ್ನು ಆರ್ದ್ರಗೊಳಿಸುತ್ತದೆ. ಕಣ್ಣಂಚನ್ನು ಒದ್ದೆಯಾಗಿಸುತ್ತದೆ.

ದೃಶ್ಯ ಮಾಧ್ಯಮದಲ್ಲಿ ಕೆಲವು ವಸ್ತುಗಳಿವೆ, ಅವು ಯಾವಾಗಲೂ ಎಷ್ಟು ಸಲ ನೋಡಿದರೂ, ಮತ್ತೆ ಮತ್ತೆ ಅದೇ ವಸ್ತುವಿಟ್ಟುಕೊಂಡು ಸಿನಿಮಾ ಮಾಡಿದರೂ ಜನರ ಮನಸ್ಸಿಗೆ ತಾಕುತ್ತದೆ. ಅವರ ಕಣ್ಣಲ್ಲಿ ನೀರು ಹುಟ್ಟಿಸುತ್ತದೆ. ಪ್ರೇಮ ಮತ್ತು ದೇಶಭಕ್ತಿ ಕೂಡ ಹೀಗೆ ಪದೇಪದೇ ಬಳಕೆಯಾಗುವ ವಸ್ತುಗಳೇ.

ದೇಶಭಕ್ತಿ ಎಂದಾಕ್ಷಣ ನಮಗೆ ಮೊದಲು ನೆನಪಾಗುವುದು ಗಡಿ ಕಾಯುವ ಸೈನಿಕರು. ಸೈನಿಕರ ತ್ಯಾಗ, ಬಲಿದಾನಗಳನ್ನು ನಾವೆಲ್ಲರೂ ಅತ್ಯಂತ ಗೌರವದಿಂದ ಕಾಣುತ್ತೇವೆ. ದೇಶಕ್ಕಾಗಿ ಪ್ರಾಣತ್ಯಾಗ ಮಾಡಲು ಸಿದ್ಧರಾಗುವ ಅವರ ಧೈರ್ಯವನ್ನು ಕೊಂಡಾಡುತ್ತೇವೆ. ಆದರೆ ಅದೇ ಸಮಯದಲ್ಲಿ ಅವರ ಕುಟುಂಬದ ಮನಸ್ಥಿತಿಯ ಬಗ್ಗೆ ಯೋಚನೆ ಮಾಡುವುದು ವಿರಳ. ಈ ಕಿರುಚಿತ್ರ, ದೇಶಭಕ್ತಿಯ ಕೌಟುಂಬಿಕ ಆಯಾಮವನ್ನು ಕಾಣಿಸುತ್ತದೆ. ಹಾಗಾಗಿಯೇ ಜನಪ್ರಿಯ ಧಾಟಿಯಲ್ಲಿಯೇ ತಯಾರಾದರೂ ತುಸು ಭಿನ್ನವಾಗಿಯೂ ಕಾಣಿಸುತ್ತದೆ.

ಅದು ಪಂಜಾಬಿನ ಒಂದು ಹಳ್ಳಿ. ಅಲ್ಲಿ ಒಂದು ಮನೆಯಲ್ಲಿ ಒಂದು ಹುಡುಗಿ ನಿಂತಿದ್ದಾಳೆ. ಅವಳ ಹೆಸರು ಸೆಹ್ಮತ್ 'ಇಂದು ಸಂಜೆ ನನ್ನ ಮದುವೆ' ಎಂದು ಎಲ್ಲರ ಎದುರಿಗೂ ಹೇಳಿಕೊಳ್ಳುತ್ತಿದ್ದಾಳೆ. ಅದಕ್ಕಾಗಿಯೇ ಕೈಗೆ ಹತ್ತಿರುವ ಮೆಹಂದಿಯನ್ನು ಆರಗೊಡದೆ ಮತ್ತೆ ಮತ್ತೆ ಹಚ್ಚಿಕೊಳ್ಳುತ್ತಾಳೆ. ನಸು ನಾಚಿಕೆಯನ್ನೂ ಅಷ್ಟೇ ಕನಸುಗಳನ್ನೂ ಕಣ್ಣುಗಳಲ್ಲಿ ತುಂಬಿಕೊಂಡು ಊರೆಲ್ಲ ಸಂಭ್ರಮದಿಂದ ಓಡಾಡುತ್ತಾಳೆ. ಆದರೆ ಅವಳು ಮಾತಿನಲ್ಲಿ ಇಂದು ಸಂಜೆ ನನ್ನ ಮದುವೆ ಎಂದು ಹೇಳುತ್ತಿದ್ದರೂ ಅವಳ ಮುಖದಲ್ಲಿ ಮದುಮಗಳ ಕಳೆಯಿಲ್ಲ. ಅವಳ ವಸ್ತ್ರವೂ ಅವಳು ಮದುಮಗಳು ಎನ್ನುವುದನ್ನು ಬೆಂಬಲಿಸುವ ಹಾಗಿಲ್ಲ.

ಆ ಹುಡುಗಿಯನ್ನು ಮದುವೆಯಾಗಬೇಕಾಗಿದ್ದ ಹುಡುಗ ಜೋಗಿಂದರ್ ಎರಡು ವರ್ಷಗಳ ಹಿಂದೆಯೇ ಅಸುನೀಗಿದ್ದಾನೆ. ಸೈನಿಕನಾಗಿದ್ದ ಅವನು ರಜೆಯ ಮೇಲೆ ಊರಿಗೆ ಬಂದಾಗ ಮದುವೆ ಸಿದ್ಧತೆ ನಡೆದಿತ್ತು. ಜೋಗಿಂದರ್ ಮತ್ತು ಸೆಹ್ಮತ್‌ರದ್ದು ಹದಿನೈದು ವರ್ಷಗಳ ಪ್ರೇಮ. ಆದರೆ ಮದುವೆಯ ಹಿಂದಿನ ದಿನ ಯುದ್ಧದ ವಾತಾವರಣ ಉಂಟಾಗಿ ಸರ್ಕಾರ ಎಲ್ಲ ಸೈನಿಕರ ರಜೆ ರದ್ದುಗೊಳಿಸಿ ವಾಪಸ್ ಕರೆಸಿಕೊಂಡಿದೆ. ಮದುವೆಯನ್ನು ಬಿಟ್ಟು ಗಡಿಗೆ ಹೋಗುವಾಗ ಸೆಹ್ಮತ್ ಅವನಿಗೆ, 'ನಿನಗಾಗಿ ಕಾಯುತ್ತೇನೆ' ಎಂದು ಮಾತುಕೊಟ್ಟಿದ್ದಾಳೆ. ಆದರೆ ಯುದ್ಧಕ್ಕೆ ಹೋದ ಜೋಗಿಂದರ್ ಮರಳಿ ಬಂದಿಲ್ಲ. ಆದರೆ ಸೆಹ್ಮತ್ ಪಾಲಿಗೆ ಅವನು ಸತ್ತಿಲ್ಲ. ಯಾವಾಗಲೂ ಸಾಯುವುದೂ ಇಲ್ಲ. ಅವಳು ಈಗಲೂ ಪ್ರತಿದಿನ ಬೆಳಿಗ್ಗೆ ಎದ್ದು, 'ಇಂದು ನನ್ನ ಮದುವೆ ಇದೆ' ಎಂದು ಖುಷಿಯಿಂದ ಹೇಳಿಕೊಳ್ಳುತ್ತ, ಮೆಹಂದಿ ಹಚ್ಚಿಕೊಳ್ಳುತ್ತ ಊರೆಲ್ಲ ಓಡಾಡಿ ಸಂಭ್ರಮಿಸುತ್ತಾಳೆ. ಹಾಗೆಯೇ ಜೋಗಿಂದರ್‌ನನ್ನು ತಾನು ಎರಡು ವರ್ಷಗಳ ಹಿಂದೆ ಬೀಳ್ಕೊಟ್ಟ ಜಾಗದಲ್ಲಿ ಹೋಗಿ ನಿಂತು ಅವನೊಂದಿಗೆ ಆಡಿದ ಕಡೆಯ ಮಾತುಗಳನ್ನು ಮತ್ತೊಮ್ಮೆ ಆಡುತ್ತ ಪ್ರತಿದಿನ ಅವನನ್ನು ಬೀಳ್ಕೊಡುತ್ತಾಳೆ. ಮತ್ತೆ ಅವನಿಗಾಗಿ ಕಾಯುತ್ತಾಳೆ.

ದೇಶವನ್ನು ಪ್ರೀತಿಸುವ ಸೈನಿಕನ ಜೊತೆಗೆ ಅವನನ್ನು ಪ್ರೀತಿಸುವ ಜನರ ಬದುಕನ್ನೂ ಕಾಡುವಂತೆ ಕಾಣಿಸುವ ಈ ಕಿರುಚಿತ್ರ, ಅದೇ ಕಾರಣಕ್ಕೇ ಮನಸ್ಸನ್ನು ಮೃದುಗೊಳಿಸುತ್ತದೆ.



**ಹೆಸರು:** ಸೆಹ್ಮತ್
**ನಿರ್ದೇಶನ/ನಿರ್ಮಾಣ:** ಲೋವಿನಾ ಬಗ್ಗಾ
**ಛಾಯಾಗ್ರಹಣ:** ಕಮಲ್ ಕೆ. ಕುಮಾವತ್
**ಸಂಕಲನ:** ಉನ್ನಿಕೃಷ್ಣನ್ ಪಯೂರ್ ಪರಮೇಶ್ವರನ್
**ತಾರಾಗಣ:** ಗಗನ್‌ದೀಪ್ ಕೌರ್, ಕರಣ್ ಸಿಂಗ್, ಮುಕೇಶ್ ಕುನಿಯಾಲ್, ಸಿಮ್ರನ್

ಕಿರುಚಿತ್ರ ವೀಕ್ಷಣೆಗೆ https://bit.ly/3CZxkh7 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

